ಸ್ವಯಂ ಘೋಷಿತ ಆಸ್ತಿ ತೆರಿಗೆ

319(705) - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೊಳಿಸಿದೆಯೇ?

ಆ) ಇಲ್ಲದಿದ್ದಲ್ಲಿ, ಯಾವ ವರ್ಷ ತಿಂಗಳಿನಲ್ಲಿ ಜಾರಿಗೊಳಿಸಲಾಗುವುದು. ಇದರ ನಿಯಮಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕಾನೂನು ಪ್ರಕಾರ ಈಗಾಗಲೇ ಜಾರಿಗೊಳಿಸಲಾಗಿದೆ ಆದರೆ ಕೆಲವು ತಿದ್ದುಪಡಿಗಳನ್ನು ಸದನದ ಮುಂದೆ ತರಲು ಸರ್ಕಾರವು ಪ್ರಸ್ತಾಪಿಸಿದೆ.

ರೈತರಿಗೆ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ

320(708) - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಶ್ರೀ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002-03 ನೇ ಸಾಲಿನಲ್ಲಿ ರೈತರಿಂದ ಪಂಪ್‌ಸೆಟ್‌ಗಳಿಗೆ ನೂತನ ಸಂಪರ್ಕಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ರೈತರಿಗೆ ಅನುಮತಿ ನೀಡಲಾಗಿದೆ;

ಆ) ಬಹುಮಹಡಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಇರುವ ನಿಯಮಗಳೇನು; ಈ ನಿಯಮಗಳನ್ನು ತಾಲ್ಲೂಕು, ಪಟ್ಟಣ ಅಥವಾ ಗ್ರಾಮೀಣ ಪ್ರದೇಸಕ್ಕೆ ಜಾರಿಗೊಳಿಸಲಾಗಿದೆಯೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) 2002-03ನೇ ಸಾಲಿನ ಏಪ್ರಿಲ್ ಮಾಹೆಯಲ್ಲಿ ನೊಂದಾಯಿತವಾದ ನೂತನ ಪಂಪುಸೆಟ್ಟುಗಳ ಸಂಪರ್ಕಕ್ಕಾಗಿ ಒಟ್ಟು ಅರ್ಜಿಗಳ ಸಂಖ್ಯೆ: 5830 ಹಾಗೂ ವಿಲೇವಾರಿಯಾದ ಅರ್ಜಿಗಳ ಸಂಖ್ಯೆ 5803

ಆ) ಬಹು ಮಹಡಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುತ್ ಸರಬರಾಜು ಮತ್ತು ವಿತರಣೆಯ ಬಗ್ಗೆ ಸಂಹಿತೆಯನ್ನು ಹೊರಡಿಸಿದ್ದು (ಇ.ಎಸ್. ಅಂಡ್ ಡಿ ಕೋಡ್ 2000-2001) ಸೆಕ್ಷನ್ - 9ರ ಪ್ರಕಾರ ಈ ಕೆಳಕಂಡ ಷರತ್ತಿಗೆ ಹಾಗೂ ನಿಯಮಗಳಿಗೆ ಬದ್ಧವಾಗಿರಬೇಕು.

ಅ. ನಿರ್ದಿಷ್ಟ ಹೊರೆ (Specified load) 25 ಕಿಲೋವಾಟ್ಸ್ ಮತ್ತು ಹೆಚ್ಚಿಗೆ ಇದ್ದರೆ.

ಆ. ಒಂದೇ ಜಾಗದಲ್ಲಿ ಹತ್ತು ಅಥವಾ ಹೆಚ್ಚಿಗೆ ವಿದ್ಯುತ್ ಸಂಪರ್ಕ ಕೇಳಿದಾಗ ಅಥವಾ ಮೊದಲೇ ಇದ್ದರೆ.

ಇ. ನಾಲ್ಕು ಅಥವಾ ಹೆಚ್ಚಿಗೆ ಅಂತಸ್ತುಗಳು ಇದ್ದರೆ (ನೆಲಮಾಳಿಗೆ ಹೊರತುಪಡಿಸಿ.

ಮೇಲೆ ತಿಳಿಸಿರುವ ಯಾವುದಾದರೊಂದು ಷರತ್ತಿಗೆ ಒಳಪಟ್ಟರೆ ಅಂತ ಕಟ್ಟಡವು ಸೆಕ್ಷನ್- 9ರ ಅಡಿಯಲ್ಲಿ ಬಹುಮಹಡಿ ಕಟ್ಟಡಕ್ಕೆ ಒಳಪಟ್ಟಿರುತ್ತದೆ.

ಈ ನಿಯಮಗಳು ಕರ್ನಾಟಕ ರಾಜ್ಯದ ಎಲ್ಲಾ ಪ್ರದೇಶಗಳಿಗೆ ಅನ್ವಯಗೊಳ್ಳುತ್ತದೆ. ಈಗಾಗಲೇ ಎಲ್ಲಾ ಪ್ರದೇಶಗಳಿಗೆ ಜಾರಿಗೊಳಿಸಲಾಗಿದೆ.

2000 ರಿಂದ 2002ರ ವರೆಗೆ ವಿವಿಧ ಹಣಕಾಸು ಸಂಸ್ಥೆಗಳಿಂದ ರಾಜ್ಯ ಸರ್ಕಾರದ ಸಾಲ

321(710) - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000 ರಿಂದ 2002 ರ ವರೆಗೆ ವಿವಿಧ ಹಣಕಾಸು ಸಂಸ್ಥೆಗಳಿಂದ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಸಾಲದ ಮೊತ್ತ ಹಾಗೂ ಬಡ್ಡಿ ದರ ಎಷ್ಟು? ಯಾವ ಯಾವ ಇಲಾಖೆಗಳಿಗೆ ಸಾಲ ಪಡೆಯಲಾಗಿದೆ? ಸದರಿ ಸಾಲದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಖರ್ಚಾದ ಹಣ ಎಷ್ಟು?

ಆ) ಈ ಸಾಲದ ಹಣದಲ್ಲಿ ಸರ್ಕಾರಿ ನೌಕರರ ವೇತನಕ್ಕೆ ಮೊತ್ತವನ್ನು ಬಳಸಲಾಗಿದೆಯೇ? ಹಾಗಾದರೆ ಬಳಸಿದ ಮೊತ್ತ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) 2000 ರಿಂದ 2002 ರ ವರೆಗೆ ವಿವಿಧ ಹಣಕಾಸು ಸಂಸ್ಥೆಗಳಿಂದ ರಾಜ್ಯ ಸರ್ಕಾರವು ತೆಗೆದುಕೊಂಡಿರುವ ಸಾಲ ಮತ್ತು ಬಡ್ಡಿ ದರದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಹಣಕಾಸು ಸಂಸ್ಥೆಯ ಹೆಸರು	2000-01 ಲೆಕ್ಕ	2001-02 ಪರಿಷ್ಕೃತ	ಬಡ್ಡಿದರ ಶೇ.ವಾರು
ಎಲ್.ಐ.ಸಿ. ಸಾಲ	168.09	160.00	12.00
ಜಿ.ಐ.ಸಿ. ಸಾಲ	28.51	8.00	12.00
ನಬಾರ್ಡ್ ಸಾಲ	212.54	230.00	10.50
ಎನ್.ಸಿ.ಡಿ.ಸಿ	16.39	13.65	12.75
ಒಟ್ಟು	425.53	411.65	

ಆ) ಇಲ್ಲ.

ಉದ್ಭವಿಸುವುದಿಲ್ಲ.